ಆ ನಂಜಿನ ವ್ಯಕ್ತಿಯೊಡನೆ ಇನ್ನೊಬ್ಬನ್ಯಾರೋ ಸೇರಿಕೊಂಡಿದ್ದ. ಮರ್ಯಾದೆಗೆ, ಅದಕ್ಕೂ ಹೆಚ್ಚಾಗಿ ಅಪ್ಪನಿಗೆ ಊರಲ್ಲಿರುವ ಗೌರವಕ್ಕೆ ಹೆದರಿ ಅಂಜಿ ಮುದ್ದೆಯಾಗಿದ್ದ ನಾನು ಅವರಿಬ್ಬರ ಆಟಕ್ಕೆ ಗೊತ್ತಿದ್ದೂ ಬಲಿಯಾಗತೊಡಗಿದ್ದೆ. ಇಲ್ಲದಿದ್ದರೆ ತಮ್ಮ ಪ್ರೀತಿಯ ಮಗಳು ಸುನಯನ ಇಂಥವಳೆಂದು ತಿಳಿದಿದ್ದರೆ ಅಪ್ಪ ಎದೆಯೊಡೆದು ಸತ್ತುಬಿಡುತ್ತಿದ್ದರು...

ಅವರಿಬ್ಬರ ಹಿಂಸೆಯ ಕ್ರೂರ ಗಳಿಗೆಗಳು ಮುಗಿದವೆಂದ ಕೂಡಲೇ ಇನ್ನೊಂದು ಆಘಾತ. ನಿನಗೆ ಗೊತ್ತಿಲ್ಲ ಚೈತ್ರ – ಹೆಣ್ಣಾಗಿ ಹುಟ್ಟುವುದೆಂದರೆ ಎಷ್ಟು ಭಯಾನಕ, ನೋವಿನ ಕೆಲಸವೆಂದು.

ಈಗ ಕಾಮುಕರಡಿ ಒಡಲಲದಹಿಸಿದ ನಾನು, ಅವರ ಅಸಹ್ಯದ ವಿಕಾರತೆಯನ್ನು ನನ್ನ ಹೊಟ್ಟೆಯಲ್ಲಿ ಬೆಳೆಸತೊಡಗಿದ್ದೆ. ಅಯ್ಯೋ! ದೇವರೇ, ನಾನೆಷ್ಟು ಬಲಹೀನಳಾದೆ. ಒಲ್ಲದ ವಾಕರಿಕೆ ಹುಟ್ಟಿಸುವ ಆ ಮಾಂಸದ ತುಂಡು ನನ್ನನ್ನು ಇನ್ನಷ್ಟು ಧೃತಿಗೆಡಿಸಿತು. ಕ್ಷಣ ಕ್ಷಣಕ್ಕೂ ಸಾವಿನ ಯೋಚನೆ ತರುತ್ತಿತ್ತು. ಆದರೆ – ಕಡೆಗೂ ನಾನು ನಿರ್ಧರಿಸಿದೆ – 'ಇಲ್ಲ, ನಾನು ಬದುಕಬೇಕು!'

ಬದುಕುವ ಛಲ ಮನಸ್ಸಿನಲ್ಲಿ ಹೊಕ್ಕಾಗ ಅದೆಂಥ ದೈತ್ಯ ಶಕ್ತಿ ಮಾತಾಡುತ್ತದೆ ಮನುಷ್ಯರಲ್ಲಿ ಗೊತ್ತೆ? ಬದುಕನ್ನು ಕಟ್ಟುವುದು ಹೇಗೆಂದು ಕಲಿಸಿಕೊಟ್ಟ ಅಪ್ಪನಿಗೂ ಗೊತ್ತಾಗದ ಹಾಗೆ, ಈ ಒಡಲ ವಿಷ ಹೊರತಳ್ಳಿ ಬದುಕಬೇಕೆಂದು ನಾನು ಗಟ್ಟಿ ಮನಸ್ಸು ಮಾಡಿದ್ದೆ. ಮತ್ತೆ ಮೊದಲಿನ ಹಾಗೆ ಏಕಾಗ್ರಳಾಗಿ ಆ ದಿನ ಬೆಳಿಗ್ಗೆ ಎದ್ದವಳೇ ನನ್ನ ಪ್ರೀತಿಯ ಸ್ವರವನ್ನು ತಬ್ಬಿಕೊಂಡು ಕೈಸೋಲುವವರೆಗೂ ನುಡಿಸಿದೆ... ಬಹಳ ದಿನದ ಬೇಗುದಿ ಕಳೆದಂತೆನಿಸಿತು. ಅಂದೇ, ಅಪ್ಪನಿಗೆ ಸಣ್ಣದೊಂದು ಸುಳ್ಳು ಹೇಳಿ – ನಮ್ಮ ಹಳ್ಳಿಯ ಪಕ್ಕದೂರಿಗೆ ಹೋಗಿ ಆ ಅನಾಮಧೇಯ ಅಸಹ್ಯವನ್ನು ಇಲ್ಲವಾಗಿಸಿದೆ. ನಾನು ಅಪರಾಧ ಮಾಡುತ್ತಿದ್ದೆನೆಂಬ ಭಾವ ನನ್ನ ಮನಸ್ಸಿನಲ್ಲಿತ್ತು ನಿಜ. ಆದರೆ ಆ ಕ್ಷಣದಲ್ಲಿ ನನಗೆ ನಾನೇ, ನಾನು. ನಾನು ಬದುಕುವುದು ಮುಖ್ಯವಾಗಿತ್ತು. ನನಗೆ ಗೊತ್ತಿದ್ದುದು ಅದು ಮಾತ್ರ...

ಈ ಘನಘೋರ ಘಟನೆಗಳ ನಂತರ ಒಂದೆರಡು ತಿಂಗಳು ಕಳೆದಿದ್ದವು. ನಾನು ನಡುರಾತ್ರಿಯವರೆಗೆ ಸ್ವರವನ್ನು ನುಡಿಸುತ್ತ ತನ್ಮಯಳಾಗಲು ಯತ್ನಿಸುತ್ತ ಯತ್ನಿಸುತ್ತ ಸೋತು ಮತ್ತೆ ಛಲದಲ್ಲಿ ರಾಗಗಳನ್ನು ಒಲಿಸಿಕೊಳ್ಳಲು ಕೂತಿದ್ದೆ. ಹಿಂದೊಮ್ಮೆ ಬಂದ ಹಾಗೆ ಇಂದೂ ಅಪ್ಪ–ಅಮ್ಮ ಬಂದು ಕತ್ತಲಲ್ಲಿ ನಿಂತು ನೋಡುತ್ತಿದ್ದರು. ಅಪ್ಪನನ್ನು ಕಂಡದ್ದೇ – ನನಗೆ ದುಃಖ ತಡೆಯದಾಯಿತು. ಎಷ್ಟೇ ಒತ್ತಿಹಿಡಿದರೂ ಕಣ್ಣಿಂದ ನೀರು ಚಿಮ್ಮಿ ಬಂತು. ಅಪ್ಪ–ಅಮ್ಮ ಹತ್ತಿರ ಬಂದಾಗ ಅವರಿಗೆ ಕಾಣದಂತೆ ನೀರನ್ನೊರೆಸಿಕೊಂಡು ಅಪ್ಪನ ಮುಖವನ್ನೇ ಮಂಜುಕಣ್ಣಲ್ಲಿ ದಿಟ್ಟಿಸತೊಡಗಿದೆ. ಅಪ್ಪ ಮೆತ್ತೆಯ ಮೇಲೆ ಕೂತರೆ, ಅಮ್ಮ ನಿಂತೇ ಇದ್ದಳು. ನನ್ನ ಭುಜ ಸವರುತ್ತ ಅಪ್ಪ ಹೇಳಿದರು – ಯಾಕೆ ಮಗು. ಮಂಕಾಗಿದ್ದೀಯ? ಇತ್ತೀಚೆಗೆ ನಿನಗ್ಯಾವುದರಲ್ಲಿಯೂ ನೆಚ್ಚುಗೆಯಿಲ್ಲ. ವಯಸ್ಸಿಗೆ ಬಂದ ಮೇಲೆ ಒಂಟಿಯಾಗಿದ್ದರೆ ಹಾಗನಿಸುತ್ತದೆ. ನೋಡು, ನಿನ್ನ ಒಳ್ಳೆಯದಕ್ಕಾಗೇ ನಾನು ಹೇಳುವುದು. ನಾಳೆ, ನಿನ್ನನ್ನು ನೋಡಲು ಯಾರೋ ಬರುತ್ತಿದ್ದಾರೆ. ನಿನಗಿಷ್ಟವಾದರೆ ಮಾತ್ರ ಒಪ್ಪು. ನಿನ್ನ ಸಂಗೀತ, ಸಾಹಿತ್ಯ, ಅಭಿರುಚಿಗಳಿಗೆ ಒಗ್ಗಬಲ್ಲ ಗಂಡನನ್ನೇ ಹುಡುಕುವೆ. ನಾಳೆ ಬರುವ ಸಂಬಂಧ ಬೇಡವಾದರೆ... ಆದರೆ, ನಿನ್ನದೂ ಓದು ಮುಗಿಯಿತು – ಮನೆಯಲ್ಲಿ ಎಷ್ಟು ದಿನ ಇರುತ್ತೀಯ. ಈ ಮನೆ ಎಂದಿದ್ದರೂ ನಿನ್ನದೇ. ನೀನು ಹೆಣ್ಣಾಗುವ ಬದಲು ಗಂಡಾಗಿದ್ದರೆ ಎಷ್ಟು ಚೆಂದವಿತ್ತು ಮಗು.